## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 257/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಡಾ. ಲಕ್ಷಿತ್ ಬಿಡ್ಡಪ್ಪ | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ | ಡಾ.ಎಂ.ಕೆ.ಅಯ್ಯಪ್ಪ | 13.06.2025 |
| ವಯಸ್ಸು | ಃ | 40 ವರ್ಷ | |
| ವೃತ್ತಿ | ಃ | ಸರ್ಜನ್ | ಪ್ರಾ.ಸಾ. ಃ 13 |
| ವಾಸಸ್ಥಳ | ಃ | ಮೈಸೂರು | ಚಾ.ಸಾ. ಃ 13 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಭಾನವಿ ಆಸ್ಪತ್ರೆಯಲ್ಲಿ ಕಳೆದ *9* ವರ್ಷದಿಂದ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ. ದಿಃ*05.10.2020* ರಂದು ಮದ್ಯಾಹ್ನ *3.45* ಕ್ಕೆ ನವೀನ್ ಕುಮಾರ್.ಎಂ.ಆರ್ ಬಿನ್ ಎಂ.ಎಸ್.ರಾಜ್ ಕುಮಾರ್ ರವರನ್ನು ಹೊಡೆದಾಟದ ಹಿನ್ನೆಲೆಯಲ್ಲಿ ಆದಂತ ಗಾಯಗಳಿಗೆ ಚಿಕಿತ್ಸೆ ನೀಡಿದ್ದೆ ಅವರಿಗೆ ಈ ಕೆಳಕಂಡ ಗಾಯಗಳು ಕಂಡುಬಂದಿದ್ದವು.

1. ಕೆಳ ತುಟಿ ಮತ್ತು ಗಲ್ಲದ ಮಧ್ಯದಲ್ಲಿ *10* ಸೆಮೀ ಅಳತೆಯ ಹರಿದ ಗಾಯ ಇತ್ತು.
2. ಮೂಗಿನ ಎಡ ಬದಿಯಲ್ಲಿ *2* ಸೆಮೀ ಅಳತೆಯ ಹರಿದ ಗಾಯ ಇತ್ತು.
3. ಎಡ ಕಣ್ಣಿನ ಕೆಳಭಾಗದಲ್ಲಿ *2* ಸೆಮೀ ಅಳತೆಯ ಹರಿದ ಗಾಯ ಇತ್ತು, ಚರ್ಮ ನಷ್ಟವಾಗಿತ್ತು.
4. ಹಣೆಯ ಎಡ ಭಾಗದಲ್ಲಿ *3* ಸೆಮೀ ಅಳತೆಯ ಹರಿದ ಗಾಯ ಇತ್ತು.
5. ಎಡ ಕಣ್ಣಿನ ರೆಪ್ಪೆಯ ಮೇಲ್ಭಾಗದಲ್ಲಿ *1* ಸೆಮೀ ಅಳತೆಯ ಹರಿದ ಗಾಯ ಇತ್ತು.

ಈ ಮೇಲೆ ಹೇಳಿದ ಎಲ್ಲಾ ಗಾಯಗಳು clean cuts without contamination, ಈ ಮೇಲೆ ಹೇಳಿದ ಎಲ್ಲಾ ಗಾಯಗಳು ತೀವ್ರ ಸ್ವರೂಪದ ಗಾಯಗಳು ಇದ್ದವು. ಸಾಕ್ಷಿದಾರರು ಗಾಯದ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-*11* ಎಂದು ಮತ್ತು ಸಾಕ್ಷಿದಾರರ ಸಹಿಯನ್ನು ನಿ.ಪಿ-*11(*ಎ*)* ಎಂದು ಗುರುತಿಸಲಾಯಿತು. ನಂತರದಲ್ಲಿ ತನಿಖಾಧಿಕಾರಿಯವರು ಒಂದು ರೇಜರ್ ಅನ್ನು ಹಾಜರುಪಡಿಸಿ ನನ್ನ ಅಭಿಪ್ರಾಯವನ್ನು ಕೋರಿದ್ದರು. ನಾನು ನನ್ನ ಅಭಿಪ್ರಾಯದಲ್ಲಿ ತನಿಖಾಧಿಕಾರಿಯವರು ಹಾಜರುಪಡಿಸಿದ್ದ ರೇಜರ್ ನಂತಹ ವಸ್ತುಗಳಿಂದ ಹೊಡೆದರೆ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯ ತಿಳಿಸಿದ್ದೆ. ತನಿಖಾಧಿಕಾರಿಯವರು ನನ್ನ ಮುಂದೆ ಹಾಜರುಪಡಿಸಿದ್ದ ರೇಜರ್ ಈಗ ನಾನು ನೋಡುತ್ತಿರುವ ರೇಜರ್ ನಂತೆಯೇ ಇತ್ತು. ಸಾಕ್ಷಿದಾರರು ತನ್ನ ಅಭಿಪ್ರಾಯದ ವರದಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-*12* ಎಂದು ಮತ್ತು ಸಾಕ್ಷಿದಾರರ ಸಹಿಯನ್ನು ನಿ.ಪಿ-*12(*ಎ*)* ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು